

# ಕಾಂಡಕೋಶ ದಾನ

# ಕ್ಯಾನ್ಸರ್ ರೋಗಿಗಳಿಗೆ ವರದಾನ

## ರಕ್ತ ಕ್ಯಾನ್ಸರ್‌ನಿಂದ ಮರುಜನ್ಮ ಪಡೆದ ರೈತ

ಸಾಫ್ಟ್‌ವೇರ್ ಎಂಜಿನಿಯರ್ ದಾನ ಮಾಡಿದ ಕಾಂಡಕೋಶದಿಂದ ರಕ್ತದ ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಪಂಜಾಬ್‌ನ ರೈತ ಮರುಜನ್ಮ ಪಡೆಯುವಂತಾಗಿದೆ. ಡಿಕೆಎಂಎಸ್ ಬಿಎಂಎಸ್‌ಟಿ ಎಂಬ ಲಾಭರಹಿತ ಸಂಸ್ಥೆಯ ಮಧ್ಯಸ್ಥಿಕೆಯಿಂದ ರೈತ ಸಾವಿನಿಂದ ಪಾರಾಗಿದ್ದಾನೆ.

■ **ಉಮಾ ಅನಂತ್**

ರಕ್ತದ ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಪಂಜಾಬ್‌ನ 35 ವರ್ಷದ ಮನ್‌ದೀಪ್ ಎಂಬ ರೈತ ದೀರ್ಘಕಾಲದ ಮೈಲೋಯ್ಡ್ ಲ್ಯುಕೇಮಿಯಾಕ್ಕೆ ಒಳಗಾಗಿದ್ದ. ಈತನಿಗೆ ಸ್ಟೆಮ್‌ಸೆಲ್ ಕಸಿ ಮಾಡಲು ಈತನ ಕುಟುಂಬದವರ ಆಕರ ಕೋಶಗಳು ಹೊಂದಾಣಿಕೆಯಾಗುತ್ತಿರಲಿಲ್ಲ. ಇಂಥ ವಿಷಮ ಪರಿಸ್ಥಿತಿಯಲ್ಲಿ ಆಪದ್ಬಾಂಧವರಾಗಿ ಬಂದವರು ಪಂಜಾಬ್‌ನವರೇ ಆದ ಸಾಫ್ಟ್‌ವೇರ್ ಎಂಜಿನಿಯರ್ ಮನ್‌ದೀಪ್.

ಹೀಗೆ ಮನ್‌ದೀಪ್‌ಗೆ ಮರುಜನ್ಮ ನೀಡಿದ ಮನ್‌ದೀಪ್. ಮೊದಲು ಇವರಿಬ್ಬರಿಗೆ ಪರಸ್ಪರ ಪರಿಚಯವೂ ಇರಲಿಲ್ಲ. ಯಾರ ಆಕರಕೋಶಗಳನ್ನು ತನಗೆ ಅಳವಡಿಸಲಾಗಿದೆ ಎಂಬ ಅರಿವು ಕೂಡ ರೈತ ಮನ್‌ದೀಪ್‌ಗೆ ಇರಲಿಲ್ಲ. ಇವರಿಬ್ಬರನ್ನು ಭಾವನಾತ್ಮಕವಾಗಿ ಒಗ್ಗೂಡುವಂತೆ ಮಾಡಿದ್ದು ಬೆಂಗಳೂರಿನ ಡಿಕೆಎಂಎಸ್ ಬಿಎಂಎಸ್‌ಟಿ ಸಂಸ್ಥೆ.

ರೈತ ಮನ್‌ದೀಪ್‌ಗೆ 2009ರಲ್ಲೇ ಕ್ಯಾನ್ಸರ್ ಪತ್ತೆಯಾಗಿತ್ತು. ಹ್ಯೂಮನ್ ಲ್ಯುಕೊಸೈಟ್ ಆಂಟಿಜೆನ್ (ಎಚ್‌ಎಲ್‌ಎ) ಎಂಬ ಆಕರಕೋಶದ ಅವಶ್ಯಕತೆ ಈತನಿಗಿತ್ತು. ಇದನ್ನು ದಾನಿಗಳ ಮೂಲಕವೇ ಪಡೆಯಬೇಕಾಗಿತ್ತು. ದಾನಿ ಮನ್‌ದೀಪ್ ಅವರ ಪತ್ನಿ ಕೂಡ ಕ್ಯಾನ್ಸರ್‌ನಿಂದ ಬಳಲಿದ್ದ ಕಾರಣ, ಮನ್‌ದೀಪ್‌ಗೆ ಕ್ಯಾನ್ಸರ್ ರೋಗಿಗಳ ಕಷ್ಟದ ಅರಿವು ಸ್ಪಷ್ಟವಾಗಿತ್ತು. ಹೀಗಾಗಿ ಅವರು ಡಿಕೆಎಂಎಸ್ ಬಿಎಂಎಸ್‌ಟಿ ಫೌಂಡೇಷನ್ ಆಯೋಜಿಸಿದ್ದ ಕಾಂಡಕೋಶ ನೋಂದಣಿ ಅಭಿಯಾನದಲ್ಲಿ ಹೆಸರು ನೋಂದಾಯಿಸಿಕೊಂಡಿದ್ದರು. ದೆಹಲಿಯ ರಾಜೀವ್‌ಗಾಂಧಿ ಕ್ಯಾನ್ಸರ್ ಸಂಸ್ಥೆ ಮತ್ತು ಸಂಶೋಧನಾ ಕೇಂದ್ರದ ನಿರ್ದೇಶಕ ಡಾ.ದಿನೇಶ್ ಭುರಾನಿ ಅವರು ರೈತ ಮನ್‌ದೀಪ್ ಅವರಿಗೆ 2020ರಲ್ಲಿ ಆಕರಕೋಶ ಕಸಿ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ನೆರವೇರಿಸಿದ್ದರು. ಈ ಪ್ರಕರಣದಲ್ಲಿ ರೋಗಿ–ದಾನಿ ಇಬ್ಬರ ಆಕರಕೋಶಗಳು ಹೊಂದಾಣಿಕೆಯಾಗಿದ್ದಷ್ಟೇ ಅಲ್ಲದೆ ಇಬ್ಬರ ಹೆಸರು, ರಾಜ್ಯ ಒಂದೇ ಆಗಿದ್ದು ಕಾಕತಾಳೀಯವೂ ಆಗಿದೆ.

ಶಸ್ತ್ರಚಿಕಿತ್ಸೆಯಾಗಿ ಸದ್ಯ ಮೂರು ವರ್ಷ ಕಳೆದಿದೆ. ಈಚೆಗೆ ಡಿಕೆಎಂಎಸ್ ಬಿಎಂಎಸ್‌ಟಿ ಮೂಲಕ ಬೆಂಗಳೂರಿನಲ್ಲಿ ಇಬ್ಬರ ಭೇಟಿಯೂ ಆಗಿದೆ. ಸಾಮಾನ್ಯವಾಗಿ ರಕ್ತದ ಕಾಂಡಕೋಶ ದಾನಿಗಳ ಹೆಸರು ಹಾಗೂ ಸ್ವೀಕರಿಸುವ ರೋಗಿಯ ಹೆಸರನ್ನು ಎರಡು ವರ್ಷಗಳ ಅವಧಿವರೆಗೆ ಗೌಪ್ಯವಾಗಿಯೇ ಇಡಲಾಗುತ್ತದೆ. ಇದು ಅಂತರರಾಷ್ಟ್ರೀಯ ಆರೋಗ್ಯ ಮಾರ್ಗಸೂಚಿಯ